**ಸಿ.ಸಿ. ನಂ.: 191/2019**

ಸಿ.ಡಬ್ಲ್ಯೂ: 4

ಪಿ.ಡಬ್ಲ್ಯೂ:3

## ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹೇಶ ನಾಯಕ |
| ತಂದೆ/ಗಂಡನ ಹೆಸರು | : | ಮೋಹನ ನಾಯಕ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಉದ್ಯೋಗ |
| ವಾಸ್ತವ್ಯ | : | ಅವರ್ಸಾ, ಅಂಕೋಲಾ |

(ಇಂದು ದಿಃ 22-08-2023 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದರರಲ್ಲಿ ತಮ್ಮ ಸಹಿ ಕಂಡು ಬರುವುದಾಗಿ ಒಪ್ಪಿದ್ದು, ಸದರಿ ದಾಖಲಾತಿ ಪಂಚನಾಮೆಯ ಧೃಡೀಕೃತ ಪ್ರತಿಯಾಗಿದ್ದು, ಅದನ್ನು ನಿ.ಪಿ.4 ಎಂದೂ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 4(ಎ) ಎಂದು ಗುರುತಿಸಲಾಯಿತು. ದಿಃ 18-09-2017 ರಂದು ಅಂಕೋಲಾ ಪೊಲೀಸ್ ಠಾಣೆಯವರು ಕಳ್ಳತನದ ವಿಚಾರದಲ್ಲಿ ರೈಲು ನಿಲ್ದಾಣದ ಬಳಿ ಪಂಚನಾಮೆಯನ್ನು ಜರುಗಿಸಿರುತ್ತಾರೆ. ನಾನು ರೈಲು ನಿಲ್ದಾಣದ ಬಳಿ ಹೋದ ಸಂದರ್ಭದಲ್ಲಿ ಅಲ್ಲಿ ಪೊಲೀಸನವರು ಇದ್ದು, ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿತರು ಸಹ ಇದ್ದರು. ಸ್ಥಳದಲ್ಲಿ ಚಿಲ್ಲರೆ ಹಣ ಹಾಗೂ ನೋಟ್ ಗಳು, ಬೆಳ್ಳಿ ಕವಚ ಇದ್ದು, ಸದರಿ ಮಾಲುಗಳನ್ನು ಕಳ್ಳತನ ಮಾಡಿರುವುದಾಗಿ ಆರೋಪಿತರೇ ತಿಳಿಸಿರುತ್ತಾರೆ. ಸ್ಥಳದಲ್ಲಿ ಪೊಲೀಸನವರು ಪಂಚನಾಮೆಯನ್ನು ಜರುಗಿಸಿ ಸದರಿ ಮಾಲುಗಳನ್ನು ವಶಕ್ಕೆ ಪಡೆದಿರುತ್ತಾರೆ. ಸದರಿ ಪಂಚನಾಮೆಯನ್ನು

ಸಿ.ಡಬ್ಲ್ಯೂ: 4

ಪಿ.ಡಬ್ಲ್ಯೂ:3

ನನ್ನ ತೋರಿಸಲಾದ ನಿಪಿ.4 ಆಗಿರುತ್ತದೆ. ನನ್ನ ಸಮಕ್ಷಮ ಪೊಲೀಸನವರು ಅಮಾನತ್ತು ಪಡಿಸಿಕೊಂಡ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು –ಆರೋಪಿತರ ಪರ ಶ್ರೀ ಎನ್. ಎಂ.ಎನ್. ವಕೀಲರಿಂದ**

ಅಂಕೋಲಾದ ರೈಲು ನಿಲ್ದಾಣದಿಂದ ನನ್ನ ಮನೆ ಸುಮಾರು 15 ಕಿ.ಮೀ. ನಂತರದಲ್ಲಿ ಇದೆ. ಪ್ರಸ್ತುತ ಪ್ರಕರಣದ ನಿಪಿ.4 ರ ಪಂಚನಾಮೆಗೆ ಸಹಿ ಮಾಡುವ ಪೂರ್ವದಲ್ಲಿ ಎರಡು ಬಾರಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ನಾನು ನಿಪಿ.4 ನ್ನು ಜರುಗಿಸಿದ ದಿನಾಂಕದಂದು ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ, ರೈಲು ನಿಲ್ದಾಣಕ್ಕೆ ಹೋಗಿರುತ್ತೇನೆ. ಪಂಚನಾಮೆಗೆ ಬರುವಂತೆ ಪೊಲೀಸನವರು ನನಗೆ ಪಂಚನಾಮೆ ಜರುಗಿಸಿದ ಹಿಂದಿನ ದಿನಾಂಕದಂದು ಕರೆ ಮಾಡಿ ತಿಳಿಸಿರುತ್ತಾರೆ. ನಾನು ರೈಲುನಿಲ್ದಾಣದ ಬಳಿ ಬೆಳಿಗ್ಗೆ 08–00 ರಿಂದ 08–15 ಗಂಟೆ ಸುಮಾರಿಗೆ ಹೋಗಿರುತ್ತೇನೆ. ನಾನು ಸ್ಥಳದಲ್ಲಿ ಸುಮಾರು 02 ಗಂಟೆ ಅವಧಿಯವರೆಗೆ ಇದ್ದೆನು.

ಪಂಚನಾಮೆಯನ್ನು ನಾನು ಹೇಳಿ ಬರೆಸಿರುವುದಿಲ್ಲ. ಪಂಚನಾಮೆಯನ್ನು ಬರೆಯಲು ಯಾರು ಮಾಹಿತಿ ನೀಡಿರುತ್ತಾರೆ ಎಂದು ನನಗೆ ತಿಳಿದಿಲ್ಲ. ನಾನು ನೋಡಿದ ಸಂದರ್ಭದಲ್ಲಿ ಮಾಲುಗಳು ಶೇಣ್ವಿ ಹಾಗೂ ಓಂಕಾರಪ್ಪ ಎಂಬ ಪೊಲೀಸ್ ಅಧಿಕಾರಿಗಳ ಬಳಿ ಇತ್ತು. ಕೈಚೀಲದ ಮಾದರಿಯ ಚೀಲದಲ್ಲಿ ಹಣ ಹಾಗೂ ಬೆಳ್ಳಿಯ ಕವಚ ಇತ್ತು. ಮಾಲುಗಳನ್ನು ಕೈಚೀಲದ ಒಳಗೆ ಇಡಲಾಗಿದ್ದು, ಪ್ರತ್ಯೇಕವಾಗಿ ಯಾವುದೇ ಬಟ್ಟೆ ಅಥವಾ ಇತರ ವಸ್ತುವಿನಿಂದ ಸುತ್ತಿರಲಿಲ್ಲ. ಸ್ಥಳದಲ್ಲಿ ಬೆಳ್ಳಿ ಮುಖ ಕವಚವನ್ನು ತೋರಿಸಿದ್ದು, ಒಂದೇ ಒಂದು ಮುಖಗವಚ ಇತ್ತು. ಮುಖಗವಚವನ್ನು ಹೊರತು ಪಡಿಸಿ ಕಣ್ಣಿನ ಆಕಾರದ ಮಾದರಿಯ ಹಾಗೂ ನೆತ್ತಿನ ಬೆಳ್ಳಿ ಆಭರಣ ಇದ್ದವು. ಮಾಲುಗಳನ್ನು ಇಡಲಾಗಿದ್ದ ಕೈಚೀಲ ಯಾವ ಬಣ್ಣದಾಗಿತ್ತು ಎಂದು ಹೇಳಲು ಆಗುವುದಿಲ್ಲ. ಸ್ಥಳದಲ್ಲಿ ಇದ್ದ ಮುಖಗವಚ ಯಾವ ದೇವಿಗೆ ಸೇರಿದ್ದಾಗಿದ್ದು ಎಂಬುದನ್ನು ತಿಳಿಸಿರುವುದಿಲ್ಲ. ಸ್ಥಳದಲ್ಲಿ ಇದ್ದ ಹಣದ ಪೈ ರೂ. 5 ರ ಮುಖ ಬೆಲೆಯ ನೋಟುಗಳು ಹಾಗೂ 1 ಹಾಗೂ 2 ಮುಖ ಬೆಲೆಯ ನಾಣ್ಯಗಳು ಇದ್ದು, ಒಟ್ಟೂ ಎಷ್ಟು ಹಣ ಇತ್ತು ಎಂದು ಹೇಳಲು ಆಗುವುದಿಲ್ಲ. ಪಂಚನಾಮಯ ಸಂದರ್ಭದಲ್ಲಿ ಸ್ಥಳದಲ್ಲಿ ಇದ್ದ ನಾಣ್ಯಗಳ ಹಾಗೂ ನೋಟಿನ ಮುಖ ಬಲೆಯನ್ನು ಪೊಲೀಸನವರು ತಿಳಿಸಿದ್ದು, 4 ರಿಂದ 5 ವರ್ಷಗಳು ಗತಿಸಿದ ಕಾರಣ ಮುಖ ಬೆಲೆಯನ್ನು ಈಗ ಹೇಳಲು ಆಗುವುದಿಲ್ಲ. ಪೊಲೀಸನವರು ನನ್ನ ಸಮಕ್ಷಮದಲ್ಲಿ ಸ್ಥಳದಲ್ಲಿ ಇದ್ದ ಮಾಲುಗಳನ್ನು ಸೀಜ್ ಮಾಡಿರುತ್ತಾರೆ. (ಸಾಕ್ಷಿಗೆ ಸೀಜ್ ಮಾಡುವುದು

**ಸಿ.ಸಿ. ನಂ.: 191/2019**

ಸಿ.ಡಬ್ಲ್ಯೂ: 4

ಪಿ.ಡಬ್ಲ್ಯೂ:3

ಎಂದರೆ ಏನು ಎಂದು ತಿಳಿದಿದೆಯಾ ಎಂದು ಕೇಳಲಾಗಿ ಸಾಕ್ಷಿಯು ತಿಳಿದಿರುವುದಾಗಿ ಹಾಗೂ ಮಾಲುಗಳನ್ನು ಸುತ್ತಿ ಶೀಲ್ ಮಾಡುವುದು ಎಂದು ತಿಳಿಸಿರುತ್ತಾರೆ) ಸ್ಥಳದಲ್ಲಿ ಎಷ್ಟು ಪ್ಯಾಕ್ ಮಾಡಿದ್ದರು ಎಂದು ಹೇಳಲು ಆಗುವುದಿಲ್ಲ.

ಪಂಚನಾಮೆಯ ಸಂದರ್ಭದಲ್ಲಿ ವಶಪಡಿಸಿಕೊಂಡ ಬೆಳ್ಳಿಯ ಮುಖಗವಚದ ತೂಕ ತಿಳಿಸಿರುವುದಿಲ್ಲ. ಮಾಲುಗಳನ್ನು ಸೀಜ್ ಮಾಡಿದ ನಂತರ ಅದರ ಮೇಲೆ ನನ್ನ ಸಹಿ ಪಡೆದಿರುವುದಿಲ್ಲ. ಪಂಚನಾಮೆ ಜರುಗಿಸಿದ ಸ್ಥಳದ ಚತುರ್ಗಡಿಯನ್ನು ನಿಖರವಾಗಿ ಹೇಳಲು ಆಗುವುದಿಲ್ಲ ಆದರೆ ಹೇಳಬಲ್ಲೆ. ನಾನು ಹೇಳುವಂತೆ ರೈಲು ನಿಲ್ದಾಣದ ಬಳಿ ಯಾವುದೇ ಪಂಚನಾಮೆಯ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಯಾವುದೇ ಹಣವನ್ನಾಗಲೀ ಅಥವಾ ಮುಖಗವಚವನ್ನಾಗಲೀ ಆರೋಪಿತರಿಂದ ವಶಕ್ಕೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸನವರು ದಾಖಲಿಸಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಲೀ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯ ದಿನಾಂಕದಂದು ನಾನು ಸ್ಥಳದಲ್ಲಿ ಇದ್ದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯ ಸಂದರ್ಭದಲ್ಲಿ ಸ್ಥಳದಲ್ಲಿ ಇತ್ತು ಎಂದು ಹೇಳುವಮಾಲುಗಳಿಗೆ ಮತ್ತು ಆರೋಪಿತರಿಗೆ ಯಾವುದೇ ರೀತಿಯಾದ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯ ಸಂದರ್ಭದಲ್ಲಿ ಸ್ಥಳದಲ್ಲಿ ಜನರು ಬಂದು ಹೋಗಿ ಮಾಡುತ್ತಿದ್ದು, ನಿಖರವಾದ ಸಂಖ್ಯೆ ಹೆಳಲು ಸಾಧ್ಯವಿರುವುದಿಲ್ಲ. ಪೊಲೀಸನವರು ದಾಖಲಿಸಿದ ಸುಳ್ಳು ಪ್ರಕರಣಕ್ಕೆಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಪ್ರ.ದ.ನ್ಯಾ.ದಂ., ಕುಮಟಾ